


‘ಏಷ್ಯಾ ಕಪ್ 2023’ರ ಫೈನಲ್ಸ್‌ನಲ್ಲಿ ವಿಕೆಟ್ ಪಡೆದ ಖುಷಿಯಲ್ಲಿ ಮೊಹಮ್ಮದ್ ಸಿರಾಜ್. ಆ ಜಾದೂ ವಿಶ್ವಕಪ್‌ನಲ್ಲಿ ಮರುಕಳಿಸೀತೆ?



1983ರ ವಿಶ್ವಕಪ್ ವಿಜೇತ ತಂಡದ ನಾಯಕ ಕಪಿಲ್ ದೇವ್

ವಿಶ್ವಕಪ್ ನಿಟ್ಟಿನಲ್ಲಿ ಮಹತ್ವದ್ದು. ಜೊತೆಗೆ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿಯೇ ಈ ತಂಡಗಳು ಮುಖಾಮುಖಿಯಾಗಲಿವೆ.

## ನಾಕೌಟ್ ಫೋಬಿಯಾ ಹಾಗೂ ಕಪಿಲ್ ಹೇಳಿಕೆ

ತವರಿನಲ್ಲಿಯೇ ಟೂರ್ನಿ ಆಯೋಜನೆಯಾಗಿರುವುದರಿಂದ ಭಾರತವೇ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡ ಎಂದು ಅನೇಕ ಕ್ರಿಕೆಟಿಗರು ಭವಿಷ್ಯ ನುಡಿದಿದ್ದಾರೆ. ಆದರೆ, 1983ರ ವಿಶ್ವಕಪ್‌ನಲ್ಲಿ ಭಾರತಕ್ಕೆ ಟ್ರೋಫಿ ತಂದುಕೊಟ್ಟ ನಾಯಕ ಕಪಿಲ್ ದೇವ್ ಮಾತ್ರ – ‘ಭಾರತ ಅತ್ಯುತ್ತಮ ತಂಡವಾದರೂ ಚಾಂಪಿಯನ್ ಆಗುವ ನೆಚ್ಚಿನ ತಂಡವೆಂದು ಹೇಳಲಾರೆ. ನನ್ನ ಹೃದಯ ಹೇಳುತ್ತಿದೆ, ಭಾರತವೇ ಟ್ರೋಫಿ ಗೆಲ್ಲುತ್ತದೆ ಎಂದು. ಅನುಭವಿ ಕ್ರಿಕೆಟಿಗನಾಗಿ ಹೇಳುವುದಾದರೆ, ಮೊದಲು ಅಗ್ರ ನಾಲ್ಕರಲ್ಲಿ ಸ್ಥಾನ ಪಡೆಯುವುದು ಆದ್ಯತೆಯಾಗಬೇಕು’ ಎಂದು ಅವರು ಹೇಳಿದ್ದಾರೆ.

ಸ್ಪರ್ಧಾತ್ಮಕ ಸವಾಲಿನ ಪ್ರಸ್ತುತ ಸನ್ನಿವೇಶದಲ್ಲಿ ಕಪಿಲ್ ದೇವ್ ಅವರ ಹೇಳಿಕೆಯ ಬಗ್ಗೆ ಮುಕ್ತವಾಗಿ ಚರ್ಚೆಯಾಗಬೇಕಾಗಿದೆ. ಹಾಲಿ ಚಾಂಪಿಯನ್ ಇಂಗ್ಲೆಂಡ್, ಭಾರತದ ಪಿಚ್‌ಗಳ ಮಹಿಮೆ ಚೆನ್ನಾಗಿ ತಿಳಿದಿರುವ ನೆರೆಯ ರಾಷ್ಟ್ರಗಳಾದ ಶ್ರೀಲಂಕಾ, ಪಾಕಿಸ್ತಾನ, ಕಠಿಣ ಪೈಪೋಟಿ ಒಡ್ಡಬಲ್ಲ ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ತಂಡಗಳ ಸಾಮರ್ಥ್ಯ ಹಗುರವಾಗಿ ಪರಿಗಣಿಸುವಂತಿಲ್ಲ.

ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿ ಭಾರತ ಐಸಿಸಿ ಟೂರ್ನಿಗಳಲ್ಲಿ ಮಹತ್ವದ ಹಂತದಲ್ಲಿ ಸೋಲು ಕಂಡ ಇತಿಹಾಸವನ್ನು ನೋಡಿಯೇ ಕಪಿಲ್ ದೇವ್ ಈ ರೀತಿಯ ಹೇಳಿಕೆ ನೀಡಿರಬಹುದು. ಭಾರತ ಐಸಿಸಿ ಟೂರ್ನಿಯಲ್ಲಿ 2011ರಲ್ಲಿ ವಿಶ್ವಕಪ್ ಜಯಿಸಿತ್ತು. ಕೊನೆಯ ಬಾರಿಗೆ 2013ರಲ್ಲಿ ಚಾಂಪಿಯನ್ ಆಗಿತ್ತು. ಆಗ ಧೋನಿ ನಾಯಕತ್ವದಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿ ‘ಚಾಂಪಿಯನ್ಸ್ ಟ್ರೋಫಿ’ ಎತ್ತಿ ಹಿಡಿದಿತ್ತು. ಅದಾದ ನಂತರ ಬಹಳಷ್ಟು ಐಸಿಸಿ ಟೂರ್ನಿಗಳಲ್ಲಿ ಭಾರತ ನಾಕೌಟ್ ಹಂತದಲ್ಲಿ ನಿರಾಸೆ ಅನುಭವಿಸಿದೆ. 2021 ಹಾಗೂ ಇದೇ ವರ್ಷ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಸೋಲು ಕಂಡಿದೆ. ಹಿಂದಿನ ಎರಡೂ ವಿಶ್ವಕಪ್‌ಗಳಲ್ಲಿ ಸೆಮಿಫೈನಲ್‌ನಲ್ಲಿ ಮುಗ್ಗರಿಸಿದೆ. 2017ರ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ